**Misc** 75/2023

**RW**-1

**ಸಾಕ್ಷಿಯನ್ನು ದಿನಾಂಕ 19.6.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀಮತಿ ಎಸ್.ಕೆ ವಕೀಲರಿಂದಃ**

ದೇವೇಗೌಡರವರು 3 ನೇ ಎದುರುದಾರನ ಅಜ್ಜನ ತಂದೆ. ದೇವೇಗೌಡರಿಗೆ ಪಟೇಲ್ ದೇವೇಗೌಡ ಮತ್ತು ದೇಪುಗೌಡ ಮಕ್ಕಳಿರುತ್ತಾರೆ. ದೇವೇಗೌಡ ಉಃ ಪಟೇಲ್ ದೇವೇಗೌಡರು ಪ್ರಕಾಶ್ ರವರ ಅಜ್ಜ. ವ್ಯಾಜ್ಯದಲ್ಲಿರುವ ಜಮೀನು ಪಟೇಲ್ ದೇವೇಗೌಡರ ಆಸ್ತಿ ಎಂದರೆ ಸರಿಯಲ್ಲ. ಪಟೇಲ್ ದೇವೇಗೌಡರು ತಮ್ಮ ಜೀವಿತ ಅವಧಿಯಲ್ಲಿ ವ್ಯಾಜ್ಯದ ಜಮೀನಿನ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಪಟೇಲ್ ದೇವೇಗೌಡರ ಮರಣದ ನಂತರ ಅವರ ವಾರಸುದಾರರು ವ್ಯಾಜ್ಯದ ಜಮೀನಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪಟೇಲ್ ದೇವೇಗೌಡರು ವ್ಯಾಜ್ಯ ಜಮೀನನ್ನು ಯಾರಿಗೂ ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ಪಟೇಲ್ ದೇವೇಗೌಡರು ವ್ಯಾಜ್ಯ ಜಮೀನನ್ನು ಬಿಟ್ಟುಕೊಟ್ಟ ಕುರಿತಂತೆ ದಾಖಲೆಗಳನ್ನು ಹಾಜರುಪಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ದೇಪುಗೌಡರು ಗುಂಗ್ರಾಲಿ ಛತ್ರದ ಪುಟ್ಟಸಿದ್ದೇಗೌಡರ ಮಗನಾದ ಸಿದ್ದೇಗೌಡರಿಂದ 1943 ರಲ್ಲಿ ಕ್ರಯ ಮಾಡಿಕೊಂಡಿರುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ತಂದೆ ಸೇರಿ ಪಟೇಲ್ ದೇವೇಗೌಡರಿಂದ ವ್ಯಾಜ್ಯ ಜಮೀನನ್ನು ಅಕ್ರಮವಾಗಿ ನಮ್ಮ ಹೆಸರಿಗೆ ದಾಖಲು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಓ.ಎಸ್ 68/1984-ನಿಆರ್5 ರಲ್ಲಿ ನನ್ನ ತಂದೆ ಹಾಜರಾಗಿ ಪ್ರತಿವಾದ

ಪತ್ರ ಸಲ್ಲಿಸಿ ಮಾಲೀಕತ್ವವನ್ನು ಕೋರಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆ ಯಾವುದೇ ದಾಖಲೆ ಸಲ್ಲಿಸದಿರುವುದರಿಂದ ವಜಾಗೊಂಡಿದ್ದು ನನ್ನ ತಂದೆ ಮಾಲೀಕರು ಇರುತ್ತಾರೆ ಎಂದು ಆದೇಶವಿರುವುದಿಲ್ಲ ಎಂದರೆ ಸರಿಯಲ್ಲ. ನಿಆರ್5 ರಲ್ಲಿ ಸರ್ವೆ ನಂಬರ್ 63/3 ಕ್ಕೆ ಸಂಬಂಧಿಸಿದಂತೆ ದಾವೆ ತೀರ್ಮಾನವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆ ನಮ್ಮಂತೆ ತೀರ್ಮಾನವಾಗಿರುವುದಿಲ್ಲ ಎಂದರೆ ಸರಿಯಲ್ಲ. ವ್ಯಾಜ್ಯ ಜಮೀನು ಸರ್ವೆ ನಂಬರ್ 63/3 ರಲ್ಲಿ 3 ನೇ ಎದುರುದಾರರು ಮತ್ತು ಅವರ ವಾರಸುದಾರರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ನಾನು ಅಥವಾ ನನ್ನ ಪರ ಯಾರೂ ಯಾವುದೇ ರೀತಿಯ ಹಕ್ಕು ಬಾಧ್ಯತೆ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

ಭೂಪರಿಹಾರ ಹಣ ಸಂಪೂರ್ಣವಾಗಿ 3 ನೇ ಎದುರುದಾರರಿಗೆ ಸೇರಬೇಕು, ನಮಗೆ ಸೇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಭೂಪರಿಹಾರ ಪಡೆಯಲು ನಮಗೆ ಯಾವುದೇ ರೀತಿ ಹಕ್ಕು ಇಲ್ಲ, ಭೂಪರಿಹಾರ ಘೋಷಣೆಯಾಗಿರುವುದರಿಂದ ದುರುದ್ದೇಶದಿಂದ ಹಣ ಪಡೆಯಲು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು